# ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ

**ಸಿಸಿ ನಂಬರ 229/2024**

ಆರೋಪಿತಳ ಹೆಸರುಃ ಶ್ರೀಮತಿ ರೇಣುಕಾ
ತಂದೆಯ ಹೆಸರುಃ ವಾಸುದೇವ ನಾಯ್ಕ
ವಯಸ್ಸುಃ 59 ವರ್ಷ
ಉದ್ಯೋಗಃ ಮನೆ ಕೆಲಸ
ವಿಳಾಸಃ ಸಾಃ ಭಾವಿಕೇರಿ ತಾಃ ಅಂಕೋಲಾ

**ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿತಳ ಹೇಳಿಕೆ**

ಪ್ರ 1: ನೀನು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದಿಯಾ?
ಉತ್ತರಃ

ಪ್ರ 2ಃ ಫಿರ್ಯಾದಿ ಜಯಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಕೋ- ಆಪರೇಟಿವ್ ಸೊಸೈಟಿ ಲಿಮಿಟೆಡ್, ಗೋಕರ್ಣ, ಶಾಖೆ ಅಂಕೋಲಾ, ಇದರ ಸಾಲ ವಸೂಲಾತಿ ಅಧಿಕಾರಿ ಪಿಡಬ್ಲ್ಯೂ 1- ನಂದೀಶ ಹೊಸಬಣ್ಣ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ ಆರೋಪಿತಳು ದಿನಾಂಕಃ 30-09-2022 ರಂದು ರೂ. 86,000/- ಸಾಲವನ್ನು ಪಡೆದಿದ್ದು, ಆರೋಪಿತಳು ವ ಆಕೆಯ ಜಾಮಿನುದಾರರು ಒಪ್ಪಿ ಆರೋಪಿತಳು ಎಲ್ಲಾ ಸಾಲ ಪತ್ರಗಳಿಗೆ ಮತ್ತು ಕರಾರಿಗೆ ಮತ್ತು ಜಾಮೀನು ಪತ್ರಕ್ಕೆ ಸಹಿ ಮಾಡಿಕೊಟ್ಟಿರುತ್ತಾರೆ. ಸದರಿ ಸಾಲದ ಕರಾರುಗಳ ಪ್ರಕಾರ ಆರೋಪಿತಳ ಸಾಲದ ಹಣವನ್ನು ಮರುಪಾವತಿ ಮಾಡಿಸುವಷ್ಟು ಹಣ ಇದೆ ಎಂದು ನಂಬಿಸಿ ರೂ.1,05,262/- ಹಣ ತುಂಬುವುದು ಬಾಕಿ ಇದ್ದಾಗ, ಆರೋಪಿತಳು ದಿನಾಂಕಃ 04-01-2024 ರಂದು ತಾನು ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಶಾಖೆಃ ಬೊಬ್ರುವಾಡ, ತಾಃ ಅಂಕೋಲಾ ರವರಲ್ಲಿ ಹಣದ

ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 504545 ನ್ನು ರೂ.1,05,262 /- ಕ್ಕೆ ನೀಡಿರುತ್ತಾಳೆ. ಸದರಿ ಆರೋಪಿತಳು ನೀಡಿದ ಚೆಕ್ಕು ಖಾತೆಯಲ್ಲಿ "**Funds Insufficient**" ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿತಳಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3ಃ ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4ಃ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀಯಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀಯಾ?

ಉತ್ತರಃ

( ಆರೋಪಿತಳಿಗೆ ಮೇಲಿನ ಪ್ರಶ್ನೆಗಳನ್ನು ಆಕೆಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 22/11/2024.

**(ಅರ್ಪಿತಾ ಬಿ. ಬೆಲ್ಲದ್)**
**ಹೆಚ್ಚುವರಿ ಪ್ರ ದ ನ್ಯಾದಂ, ಅಂಕೋಲಾ.**